ಹಗುರ ಆಗಿದ್ರಂತೂ... ಆಹಹಾ... ನಾನು ಅಮ್ಮನನ್ನೂ ಮೀರಿಸಿದ ಖುಷಿ ನನ್ನನ್ನ ಆವರಿಸಿಕೊಂಡು ಬಿಡ್ತದ.

ರಾಖಿ ಹಬ್ಬಕ್ಕ ಅಣ್ಣ ಇದ್ದಕ್ಕಿದ್ದಂಗ ಮನೀಮುಂದ ಬಂದು ನಿಂತ್ರಂತೂ... ಆಗೂ ಖುಷಿಗೆ ಅಣ್ಣನ ಮುಖ ಕಾಣೂದೇ ಇಲ್ಲ. ಕಣ್ಣ ಪಸೆಯೊಳಗ ಖುಷಿ ತನ್ನದೊಂದು ಅಲೆ ಮೂಡಿಸಿರ್ತದ... ಅದಷ್ಟೇ ಅಲ್ಲ, ಮದಿವಿ ಆಗಿ ಆರು ತಿಂಗಳಾಗಿರ್ತದ. ತಂಗಿ ಏನರೆ ಮನೀಗೆ ಇರಾಕಂತ ಬಂದ್ಲೋ... ಹಿಗ್ಗು ಹೀರಿಕಾಯಿಯಷ್ಟೇ ಉದ್ದಾನುದ್ದ ಬೆಳದಬಿಟ್ಟಿರ್ತದ. ಅತ್ತಿ ಮಾತಾಡೂದು ಹೆಂಗ, ಮಾವ ಚಾದ ಬಿಸಿ ಗ್ಲಾಸು ಹಿಡಿದು ಸೊರಕ್ ಅಂತ ಹೀರೂದು... ನಮ್ಮತ್ತಿ ಈಟ ಹುಬ್ಬಿಗೆ ಗಂಟ ಹಾಕ್ಕೊಂಡು, ಮತ್ತ ನಕ್ಕೊಂತ ಮಾತಾಡೂದು... ಇವೆಲ್ಲ ಅಕಿನ್ನ ಮುಂದ ಮಾಡಿ ನಗಬೇಕಲ್ಲ... ಅವಿತಿಟ್ಟ ನಗು, ಬಚ್ಚಿಟ್ಟ ಕಣ್ಣನಿ ಎಲ್ಲಾ ಬಯಲಿಗೆ ಬರೂದೆ ಅವಾಗ.

ಹಿಂಗ ಬದುಕಿನ ಬಣ್ಣ ಇದ್ದಂಗೆ ಹಸರು. ಆದ್ರ ಮದಿವಿ ಆದ ಮ್ಯಾಲೆ ನನ್ನ ಗಂಡಗ ನೀಲಿ ಸೇರ್ತದ. ಆಕಾಶದಷ್ಟು ವಿಶಾಲ... ನಿಗೂಢವನ್ನೇ ತನ್ನ ಉಡಿಯೊಳಗ ಇಟ್ಕೊಂಡ ಬಣ್ಣ ಅದು. ನೀಲಿಯೊಳಗ ನಾನು ಛಂದ ಕಾಣ್ತೇನಿ ಅಂತನೂ ಅಂವಾ ಹೇಳ್ತಾನ... ನಂಗ್ಯಾಕೋ ಆ ಆಕಾಶದ ನೀಲಿ ಅವನ ಕಣ್ಣಾಗ ಕಾಣ್ಬೇಕು. ನಾನು ಹಸಿರುಡಬೇಕು ಅನ್ನೂ ಆಸಿ ಎಲ್ಲೋ ಹಿಂದ ಸರದೇ ಬಿಡ್ತದ. ಇದು ಬಣ್ಣದ್ದಷ್ಟೇ ಅಲ್ಲ, ನಮ್ಮ ಅಭಿರುಚಿ, ಆಸಕ್ತಿ ಎಲ್ಲಾ ಬದಲಾಗ್ತಾವ. ಮೀರಾಬಾಯಿ ಅದ್ಯಾಕ ಹಂಗ ಹಾಡಿದ್ಲೋ... ಲಾಲಿ ಮೇರಿ ಲಾಲ್ ರಂಗಕಿ, ಜಿತ್ ದೇಖೆ ಉತ್ ಲಾಲ್. ಲಾಲಿ ದೇಖನ ಮೈ ಗಯಿ, ಮೈ ಭೀ ಹೋಗಯಿ ಲಾಲ್... ಅಂತ ನಾವೂ ಹಂಗ ನಮ್ಮನ್ನೇ ನಾವು ಮರತುಬಿಡ್ತೀವಿ.

ನಾವು ಕೂಡಿದ್ವಿ ಅಂತ ಹೇಳೂದ್ರೊಳಗ ನಾನು ಕಳಕೊಂಡಿದ್ದೇನು ಅನ್ನೂದೆ ಗೊತ್ತಾಗಿರೂದಿಲ್ಲ. ನಾನೇ ಕಳದುಹೋಗಿರ್ತೀನಿ ಅಲ್ಲಿ. ಮುಂಜೇನಿಯ ಸವಿನಿದ್ದಿಯನ್ನ ಅಮ್ಮನ ಜೇನ ಧ್ವನಿ ಏಳಿಸುವ ಬದಲು ಇನ್ನಷ್ಟು ಮುರುಟಿಮಲಗುವ ಸುಖ ಅಲ್ಲಿಗೇ ಮುಗದಿರ್ತದ. ಇಲ್ಲಿ ಅಲಾರಾಮಿನ ಕರ್ಕಶ ಧ್ವನಿ ಎಚ್ಚರಿಸಿದಾಗಲೇ ನಾವು ಅರ್ಧ ದಿನ ಕಳದುಬಿಟ್ಟಿರ್ತೀವಿ ಮನೋವೇಗದೊಳಗ.

ಫ್ರಿಜ್‌ನಾಗಿಂದ ಹಾಲು ಹೊರಗಿಟ್ಟು, ಹೀಟರ್ ಹಾಕಿ, ಮುಂಜೇನಿ ಕೆಲಸ ಮುಗಸೂದ್ರೊಳಗೇ ಅಡಗಿ ಏನು ಮಾಡೂದು, ಡಬ್ಬಿಗೇನಿಡೂದು, ತಿಂಡಿಗೆ ಏನು ಕೊಡೂದು, ವಯಸ್ಸಾದ ಅತ್ತಿ ಮಾವ ಅದಾರ, ಅವರಿಗೆ ಮಧ್ಯಾಹ್ನಕ್ಕ ಏನರೆ ಮಾಡಿಡಬೇಕು. ಸಂಜೀಕ ಬಂದಮ್ಯಾಲೆ ಕೆಲಸ ಹಗುರ ಮಾಡ್ಕೊಬೇಕು ಅಂದ್ರ, ಮುಂಜೇನೆ ಏನರೆ ಹೆಚ್ಚಿಟ್ಟು, ಕೊಚ್ಚಿಟ್ಟು ಹೋಗ್ಬೇಕು. ಏನು ಹೆಚ್ಚೂದು... ಇಂಥಾವೆಲ್ಲ ಮನಸಿನಾಗ ಅರ್ಧ ಕೆಲಸ ಮುಗದ್ರ ಇಡೀ ದಿನಾ ಸರಳ ಸುರಳೀತ ಹೋಗ್ತದ.

ಹಿಂಗಿದ್ರ ಬದುಕು ಏನ ಛಂದ ಬಿಡ್ರಿ... ಆದ್ರ ಅವಾಗವಾಗ ನಡೂನಡೂ ನಮ್ಮ ನೀಲಿ ಮುಗಿಲಿನ ಮ್ಯಾಲೆ ಕಾರ್ಮೋಡ ಹಾದು ಹೋಗಬೇಕಲ್ಲ... ಎಲ್ಲೋ ಒಂದು ಮಾತು, ಕಿಡಿಯಾಗಿ ಸಿಡಿದು, ಕೋಪಾಗ್ನಿ ಭುಗಿಲೆಂದು, ಮಾತು ಅರಳಿನಂಗ ಪಟಾಪಟಾ ಸಿಡೀತಾವ. ವಟಾವಟಾ ಅಂತೀವಿ. ಅನ್ಕೊಂತ ಅಡಗಿ ಮಾಡಿದ್ರೂ ಊಟ ಮಾಡದೇ ಗಂಡ ಕೆಲಸಕ್ಕ ಹೋದ್ರ... ಒಂದು ತುತ್ತು ಗಂಟಲಿನಿಂದೊಳಗ ಇಳದ್ರ ಹೇಳ್ರಿ... ಇಂಥವೇ ಮೋಡಗಳ ಭಾರ ಎದಿಯೊಳಗ. ಮಂಜ ಮುಂಜೇನೆ ಅಳಾಕ ಸೈತ ಟೈಮಿರೂದಿಲ್ಲ.

ಕಚೇರಿಗೆ ಅವೊತ್ತೊಂದಿಷ್ಟು ಹೆಚ್ಚಿನೆ ಕಾಡಗಿ ಬಳಕೊಂಡು ಹೋಗೂದು... ಕಣ್ಣ ಸುತ್ತ ನೀರು